ಘಟನೆಗಳಿಗೆಲ್ಲಾ ಹೇತುವಾಗಲೆಂಬಂತೆ ಏನೊ ಅವರಿಗೆ ಒಪ್ಪಿತವಾದ ಯಾವ ಕನ್ಯೆಯೂ ವಾಸುದೇವರ ಕೈಹಿಡಿದು, ಈ ಹಳ್ಳಿಕೊಂಪೆಗೆ ಬರಲೊಪ್ಪದೆ ಕಂಡಕಂಡ ಸಂಬಂಧಗಳೆಲ್ಲಾ ಕೈ ಬಿಟ್ಟು ಹೋದವು.

ಕ್ರಮೇಣ ನಿಸರ್ಗದ ನಡುವಿನ ನೆಮ್ಮದಿಯ ಬದುಕಿಗೆ ಒಗ್ಗಿಕೊಂಡಿದ್ದ ವಾಸುದೇವ ಮದುವೆಯ ಬಗ್ಗೆ ತಲೆಕೆಡಿಸಿಕೊಳ್ಳುವುದನ್ನು ನಿಲ್ಲಿಸಿ, ಸಾಹಿತ್ಯ ಕೃತಿಗಳನ್ನೇ ತಮ್ಮ ನಿತ್ಯ ಸಂಗಾತಿಗಳನ್ನಾಗಿ ಮಾಡಿಕೊಂಡರು.

ಹೀಗೆ ಸರಳವಾಗಿ ಸಾಗುತ್ತಿದ್ದ ಅವರ ಬದುಕಿನಲ್ಲಿ ಮತ್ತೆ ಅನಿರೀಕ್ಷಿತ ಬಿರುಗಾಳಿ ಏಳಲು ಕಾರಣಳಾದವಳೇ ಈ ದೇವಿ. ಅವರ ಒಕ್ಕಲು ಮಗ ಸೋಮ ಅದೆಲ್ಲಿಂದಲೋ ಕಟ್ಟಿಕೊಂಡು ಬಂದ ಅವನ ಅಪೂರ್ವ ಸುಂದರಿ ಹೆಂಡತಿ ದೇವಿ! ಈ ಸೋಮ ಎಳೆಯ ಹುಡುಗನಿದ್ದಾಗಲೇ ತಬ್ಬಲಿಯಾಗಿ ವಾಸುದೇವರ ಮನೆಗೆ ಬಂದು ಸೇರಿದ್ದ. ಕೆಲದಿನಗಳ ಹಿಂದೆ ಯಾವುದೋ ಬಾದರಾಯಣ ಸಂಬಂಧ ಹುಡುಕಿಕೊಂಡು ಗೋಕರ್ಣ ಸಮೀಪದ ಹಳ್ಳಿಯತ್ತ ಹೋಗಿದ್ದ ಆತ. ಅವನಿಗೆ ಅದೇಕೋ ಒಂದು ದಿನ ಹಳೆಯ ಸಂಬಂಧವೊಂದು ನೆನಪಿಗೆ ಬಂದಿತ್ತಂತೆ!

ಹಾಗೆ ಹೋದವನು ವಾಪಸ್ಸು ಬರುತ್ತಾ ತಾನು ಮದುವೆಯಾಗಿರುವುದಾಗಿ ಹೇಳಿಕೊಂಡು, ಹರೆಯ ಉಕ್ಕುತ್ತಿದ್ದ ಚೆಲುವೆಯೊಬ್ಬಳನ್ನು ಕಟ್ಟಿಕೊಂಡೇ ಬಂದಿದ್ದ! ಆಕೆಯ ಕುಡುಕ ಅಪ್ಪ ಇನ್ನೊಬ್ಬ ಮಹಾ ಕುಡುಕ ಮುದುಕನಿಗೆ ಹಣದಾಸೆಗಾಗಿ ಈಕೆಯನ್ನು ಮದುವೆ ಮಾಡಿಕೊಡಲು ಮುಂದಾಗಿದ್ದನಂತೆ! ಅವನೊಂದಿಗೆ ಹೊಡೆದಾಡಿ ರಾತ್ರೋರಾತ್ರಿ ಅವಳನ್ನು ಈ ಹಳ್ಳಿಗೆ ಸೋಮ ಕರೆ ತಂದಿದ್ದ!

ಹಳ್ಳಿಗೆ ಮರಳಿದವನೇ ಮುಂಜಾನೆ ತನ್ನ ಈ ಸಾಹಸದ ವರದಿಯನ್ನೊಪ್ಪಿಸಿ, ಒಡೆಯರ ಅಭಯ ಪಡೆಯಲೆಂದು ವಾಸುದೇವರಲ್ಲಿಗೆ ಮಡದಿಯನ್ನು ಕರೆದುಕೊಂಡು ಹಾಜರಾಗಿದ್ದ!

ಸೋಮನನ್ನು ಒತ್ತಿಕೊಂಡೇ ನಿಂತಿದ್ದ ಈ ಅಪ್ರತಿಮ ಚೆಲುವೆಯನ್ನೊಮ್ಮೆ ವಾಸುದೇವರು ದಿಟ್ಟಿಸಿ ನೋಡಿದರು. ಈಕೆಯನ್ನು ಪಡೆದ ಸೋಮ ಅದೃಷ್ಟವಂತ ಅಂದುಕೊಂಡಿತು ಅವರ ಒಳಮನಸ್ಸು! ಅದಾಗಲೇ ಅವರ ಅಮ್ಮ ಮದುಮಕ್ಕಳಿಗೆ ಉಡುಗೊರೆಯನ್ನು ತಂದು ಕೈಗಿತ್ತರು. ''ದೇವೀ, ಅಮ್ಮ ಮತ್ತು ಒಡೆಯರ ಕಾಲಿಗೆ ಬೀಳು'' ಎಂದ ಸೋಮ ತಾನೂ ಪಾದ ಮುಟ್ಟಿ ನಮಸ್ಕರಿಸಿದ. ಕಾಲಿಗೆರಗಿದ ದೇವಿ ತನ್ನ ಹೃದಯ ತುಂಬುತ್ತಿರುವಂತೆ ವಾಸುದೇವರಿಗೆ ಭಾಸವಾದರೆ, ಕೆಲಸಕ್ಕೆ ಹರೆಯದ ಹೊಸ ಆಳು ಸಿಕ್ಕಿದ್ದಕ್ಕೆ ಅವರಮ್ಮನಿಗೆ ಖುಷಿಯಾಗಿತ್ತು.

'ನಾಳೆಯಿಂದ ಇಬ್ಬರೂ ಕೆಲ್ಸಕ್ಕೆ ಬರ್ತೇವಯ್ಯ' ಎಂದ ಸೋಮ, ದೇವಿಯೊಂದಿಗೆ ಹೊರಟುಹೋದ.

★★★

ಹೇಳಿ ಹೋದಂತೆ ಮರುದಿನವೇ ದೇವಿಯೊಂದಿಗೆ ತೋಟದ ಕೆಲಸಕ್ಕೆ ಹಾಜರಾದ ಸೋಮನಿಗೆ, "ಹೊಸಾ ಹೆಂಡತಿಯನ್ನು ಯಾಕೆ ದುಡಿಸುತ್ತಿ ಮಾರಾಯ" ಎಂದು ವಾಸುದೇವರು ಗೇಲಿ ಮಾಡಿ ನಕ್ಕರು. "ಹೊಟ್ಟೆ ತುಂಬಬೇಕಲ್ಲಾ ಅಯ್ಯಾ..." ಎಂದುತ್ತರಿಸಿ ಆತನೂ ನಕ್ಕಿದ್ದ...

ಆಳುಗಳು ದುಡಿಯುವಲ್ಲಿ ಮೇಲ್ವಿಚಾರಣೆಗೆ ಬಂದು ನಿಲ್ಲುತ್ತಿದ್ದ ವಾಸುದೇವರತ್ತ ನಡುಬಗ್ಗಿಸಿ ದುಡಿಯುತ್ತಿದ್ದ ದೇವಿ ಆಗೊಮ್ಮೆ ಈಗೊಮ್ಮೆ ನೆಟ್ಟಗೆ ನಿಂತು ತುಸು ಅಳುಕಿನಿಂದಲೇ ಸಹಜ ಸ್ನೇಹಭಾವದ ಒಂದು ಮುಗುಳ್ನಗೆ ಬೀರುವುದಿತ್ತು. ಹೃದಯ ಸೂರೆಗೊಳ್ಳುವ ಆ